ಶ್ರೀ ಕೆ. ಲಕ್ಕಪ್ಪನವರು.—ಸುಮಾರು ಈ ವರದಿ ಬಂದು ಒಂಭತ್ತು ತಿಂಗಳುಗಳಾಗಿವೆ ಎಂದು ಹೇಳಿದರೆ ನಂಬುತ್ತೀರಾ ?

Sri T. CHANNIAH.—It may be.

ಶ್ರೀ ಲಕ್ಕಪ್ಪನವರು.—ವರದಿ ಬಂದು 9 ತಿಂಗಳುಗಳಾದರೂ ಇಷ್ಟು ಕಾಲ ನಿಧಾನವಾಗುವುದಕ್ಕೆ ಕಾರಣವೇನು ?

Sri T. CHANNIAH.—The decision will be expedited. There is some delay because the District Board has not given its quota. Therefore it will take some time for acceptancee of the proposal.

ಶ್ರೀ ಕೆ. ಲಕ್ಕಪ್ಪನವರು.—ಈ ತೊಂದರೆ ಇರುವ ಕಾರಣದಿಂದ ಸದ್ಯಕ್ಕೆ ಬೇರೆ ಕಡೆ ಅಣತಿ ಗ್ರಾಮದಲ್ಲಿ ಮಂಜೂರಾಗಿರುವ ಡಿಸ್ಪೆನ್ಸರಿಯನ್ನು ಇಲ್ಲಿಗೆ ವರ್ಗಾಯಿಸಿ ಇಲ್ಲಿ ಪ್ರಾರಂಭಿಸಬಹುದೆಂದು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ವರದಿ ಕಳುಹಿಸಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯನವರು.—ಹೌದು.

ಶ್ರೀ ಕೆ. ಲಕ್ಕಪ್ಪನವರು.—ಆದ್ದರಿಂದ ಜರೂರಾಗಿ ಮಂಜೂರು ಮಾಡಬಹುದಲ್ಲವೆ?

ಶ್ರೀ ಟಿ. ಚನ್ನಯ್ಯನವರು.—ಜಾಗ್ರತೆಯಾಗಿ ಮಾಡುತ್ತೇವೆ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಈಗ ಮಂಜೂರಾಗಿರುವ ಆಸ್ಪತ್ರೆಗಳಲ್ಲಿ ಡಾಕ್ಟರೇ ಇಲ್ಲ ಎಂಬುದು ಗಮನಕ್ಕೆ ಬಂದಿದೆಯೆ ?

Mr. SPEAKER.—That does not arise.

Request for a Health Centre in Sriramadevara North Channel Area.

Q.—38. Sri K. LAKKAPPA (Channarayapatna).—

Will the Government be pleased to state :—

(*a*) whether they are aware that Malaria is rampant in Sriramadevara North Channel Area in Channarayapatna Taluk ;

(*b*) whether they are aware that repeated requests have been made by the sufferers of that area for the starting of a Health Centre in that area ;

(*c*) whether they have taken any steps to start a Health Centre there ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) Yes.

(*c*) The question of establishing a Health Unit at the place is under consideration of Government.

ಶ್ರೀ ಲಕ್ಕಪ್ಪನವರು.—ಹೀಗೆ ಮಲೇರಿಯಾ ಹಾವಳಿಯು ಜಾಸ್ತಿಯಾಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದ ಮೇಲೆ ರಾಕ್ ಫೆಲರ್ ಇನ್‌ಸ್ಟಿಟ್ಯೂಟ್‌ನವರು ಅಲ್ಲಿ ಮಲೇರಿಯಾ ನಿವಾರಣೆಗಾಗಿ ಕೆಲವು ಕಾರ್ಯಕ್ರಮಗಳನ್ನಿಟ್ಟುಕೊಂಡು ಕೆಲಸ ಮಾಡುತ್ತಿರುವುದೂ, ಅವರು ಅದನ್ನು ನಿಲ್ಲಿಸಿದಮೇಲೆ ಬಹಳ ತೊಂದರೆಯಾಗುತ್ತದೆಂಬುದೂ ಸರ್ಕಾರದ ಗಮನಕ್ಕೆ ಬಂದಿದೆಯೆ?

Sri T. CHANNIAH.—It is for that reason that we want to start a Health Unit there.

ಶ್ರೀ ಕೆ. ಲಕ್ಕಪ್ಪನವರು.—ಆರೋಗ್ಯ ಕೇಂದ್ರವನ್ನು ಪ್ರಾರಂಭಿಸುವುದಕ್ಕೆ ಬೇಕಾದ ಕಟ್ಟಡ ಆ ಪ್ರದೇಶದಲ್ಲಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Sri T. CHANNIAH.—I want notice.

ಶ್ರೀ ಕೆ. ಲಕ್ಕಪ್ಪನವರು.—ಅಲ್ಲಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಟಿ. ಚನ್ನಯ್ಯನವರು.—ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕೆಂದಿದ್ದೇವೆ. But on account of some difficulty in providing Doctors we could not start the Health Unit. We are going to start it as early as possible.

ಶ್ರೀ ಕೆ. ಲಕ್ಕಪ್ಪನವರು.—ರಾಕ್ ಫೆಲರ್ ಇನ್‌ಸ್ಟಿಟ್ಯೂಷನವರು ಅಲ್ಲಿ ಜನರ ಅನುಕೂಲಕ್ಕಾಗಿ ಬಹಳವಾಗಿ ಕೆಲಸ ಮಾಡುತ್ತಿರುವುದರಿಂದ ಅಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸ

ಬೇಕೆಂದು ಸರ್ಕಾರದವರು ಗಮನದಲ್ಲಿಟ್ಟು ಕೊಂಡಿದ್ದಾರೆಯೆ?

ಶ್ರೀ ಟಿ. ಚನ್ನಯ್ಯನವರು.—ಹೌದು.

ಶ್ರೀ ಕೆ. ಲಕ್ಕಪ್ಪನವರು.—ದಯವಿಟ್ಟು ಕೂಡಲೆ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವು ದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳು ತ್ತೀರಾ?

Sri T. CHANNIAH.—We will certainly do it.

———

Combined Dispensary at Molakalmuru.

Q.—83. Sri A. BHEEMAPPA NAIK (Molakalmuru).—

Will the Government be pleased to state :—

(*a*) the amount of deposit made in Government by Molakalmuru Municipality and Sri Bhari Thippeswamappa for the construction of the combined hospital at Molakalmuru ;

(*b*) the proposal made by the Medical Department in that regard ;

(*c*) the stage at which the proposal is pending ;

(*d*) when the work will be completed ?

A.—Sri T. CHANNIAH (Minister for Public Health and Local Self-Government).—

(*a*) Rs. 2,823 by the Municipal Council and Rs. 5,000 by Sriyuts Bhari Thippeswamappa and Bhari Channabasappa (jointly).

(*b*) Proposals for the construction of a Combined Dispensary building at an estimated cost of Rs. 42,000, and for the opening of the Women's Section of the Dispensary have been made by the Medical Department.

(*c*) Payment of the full amount promised by the donors is awaited. Normally at least half the estimated cost has to be deposited by the donors.

(*d*) The work will be taken up after the donors fully pay the promised donation.

1 P.M.

Sri A. BHEEMAPPA NAIK.—May I know what is the amount promised by the donors ?

Sri T. CHANNIAH.—Rs. 10,000.

Sri A. BHEEMAPPA NAIK.—Have they given an undertaking to that effect in writing ?

Sri T. CHANNIAH.—No. ಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ಬಾಕಿ ಹಣ ಕೊಡಿ ಎಂದು ರಿಮೈಂಡರ್ ಕಳುಹಿಸಿ ದ್ದೀರಾ?

ಶ್ರೀ ಟಿ. ಚನ್ನಯ್ಯನವರು.—ಮಾಡಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಯಾವ ತಾರೀಖಿನಲ್ಲಿ ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಮಾಡಿ ದ್ದೇವೆ ಎಂದು ಹೇಳಿದಿರಲ್ಲಾ ಆದರಲ್ಲಿ ಏನಾ ದರೂ ಯಾವ ತಾರೀಖಿನಲ್ಲಿ ಮಾಡಿದೆ ಎಂಬ ಗುರುತು ಇದ್ದು ಹೇಳಿದ್ದೀರಾ ?

ಶ್ರೀ ಟಿ. ಚನ್ನಯ್ಯನವರು.—ವಿವರಗಳು ಇಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹಾಗಾದರೆ ಮಾಡಿದ್ದೇವೆ ಎನ್ನುವುದಕ್ಕೂ ಕೂಡ ವಿವರಗಳು ತಮ್ಮಲ್ಲಿ ಇಲ್ಲವೇ ?

SOME MEMBERS.—Question hour is over.

Sri A. BHEEMAPPA NAIK.—Even though question hour is over the Speaker can allow further supplementaries until the question taken up is completed.

ಈಗ ಎಷ್ಟು ದಿವಸ ಆಯಿತು ಈ ಹಣ ಕೊಟ್ಟು?

ಶ್ರೀ ಟಿ. ಚನ್ನಯ್ಯನವರು.—ಕಾಲ ಗೊತ್ತಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಈ 10 ಸಾವಿರದಲ್ಲಿ 7 ಸಾವಿರ ರೂಪಾಯಿ ಜಾತಾ ಉಳಿದ ಹಣ ಕೊಟ್ಟ ಕೂಡಲೇ ಪಾವತಿ ಚೀಟಿ ಹಾಜರು ಮಾಡಿದರೆ ಕೆಲಸ ಪ್ರಾರಂಭಿ ಸುತ್ತೀರಾ?

ಶ್ರೀ ಟಿ. ಚನ್ನಯ್ಯನವರು.—ಖಂಡಿತವಾಗಿ ಮಾಡಿಕೊಡುತ್ತೇವೆ.

Sri K. HANUMANTHAIYA.—Question hour is over.

Mr. SPEAKER.—We started four minutes late.

———